129(2)

"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 17 | ಮಂಗಳವಾರ 2–10–45 | ಬಿಡಿ ಪ್ರತಿ 3 ಪೈ

ಭಾರತದ ಸ್ವಾತಂತ್ರ್ಯ 1946 ರಲ್ಲಿ

ಈ ದಿನದ ಗಾಂಧೀ ಜಯಂತಿ ಹಿಮಾಲಯದ ಜ್ಯೋತಿರ್ಮಠದ ಸ್ವಾ

ಗಾಂಧೀಜೀ
ಚಿರಾಯುವಾಗಲಿ

ಗಾಂಧೀ ಜಯಂತಿ ಉತ್ಸವಗಳು ಭಾರತಾದ್ಯಂತ ಮತ್ತು ಪರದೇಶದ ಹಲವೆಡೆಗಳಲ್ಲಿ ಆಚರಿಸಲ್ಪಡುವುದು.

ವೃತ್ತಾಂತ ಸಂಗ್ರಹ

ಬೆಂಗಳೂರಿನಲ್ಲಿನ ಮೈಸೂರು ಪತ್ರಿಕೋದ್ಯೋಗಿ ಸಂಘದ ವಿಾಟಿಂಗು ಕಳೆದ ತಾ || 30 ರಲ್ಲಿ ನಡೆದು, ಗಾಂಧೀಜಿಯವರಿಗೆ 77 ನೇ ವರ್ಧಂತ್ಯುತ್ಸವ ಸುಬಂಧದಲ್ಲಿ ಅವರನ್ನು ಅಭಿನಂದಿಸಿ, ಅವರು ದೀರ್ಘ ಕಾಲದವರೆಗೆ ಮಾನವ ಸೇವೆ ಮಾಡಲು ಭಗವಂತನು ಕರುಣಿಸಲೆಂದು ಶವಾವು ಮಾಡಲಾಯಿತು.

o o

ಭದ್ರಾವತಿ ಬೆಂಗಳೂರು ಕೋಲಾರದ ಕೂಲಿಗಾರರ ಮೇಲಿನ ಪ್ರತಿಬಂಧಕ ಆಜ್ಞೆಗಳನ್ನು ಹಿಂದೆಗೆದುಕೊಂಡಿರುತ್ತೇವೆಂದು 4 ನೇ ತಾ || ಪ್ರಭುತ್ವದ ಆಜ್ಞೆ ಹೊಂಬೀಳಲಿದೆಯಂತೆ. (ವಿ. ಕ.)

o o

ಲಂಡನ್ನಿನಲ್ಲಿ ಮೈಸೂರು ಸಂಸ್ಥಾನದ ಟ್ರೇಡ್ ಕಮಿಷನರಾಗಿ ಸಿ ಐ ಲ್ ಸರ್ವೀಸ್ ಕಮಿಷನರ್ ಶ್ರೀ ಗಣಪತಯ್ಯನವರು ನೇಮಿಸಲ್ಪಡುವರೆಂದು ತಿಳಿದು ಬಂದಿದೆ.

ಹಿಮಾಲಯದ ಜ್ಯೋತಿರ್ಮಠದ ಸ್ವಾಮಿಗಳ ಸರ್ವಾಧಿಕಾರಿಯು, ಮೈಸರಾಯರು ಭಾರತಮಂತ್ರಿಯವರನ್ನು ಮತ್ತೆ ನೋಡುವರೆಂದೂ, 1946 ನೇ ಫೆಬ್ರವರಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದೆಂದು ಭವಿಷ್ಯ ಹೇಳಿರುವರ.

ಜಪಾನ್ ಸೈನ್ಯದ 7 ನೇ 4 ಭಾಗ ವಿಸರ್ಜಿಸಲಾಗಿದೆ. ಹಿರೋಹಿಟೋರ ರಾಜ್ಯಪರಿತ್ಯಾಗವನ್ನು ಯಾವ ಪಾರ್ಟಿಯವರೂ ಇಚ್ಛಿಸುತ್ತಿಲ್ಲ.

ಬೀಹಾರಿನಲ್ಲಿ ರೇಷನ್ ಪದ್ಧತಿ 1951–52 ರವರೆಗೆ ಚಾರಿಯಲ್ಲಿರಬಹುದೆಂದು ಹೇಳಲಾಗಿದೆ.

ಸ್ಟಾಲಿನ್ನರು ನಿಷ್ಪೃತ್ಸರಾಗುವ ಸಂಭವವಿಲ್ಲವೆಂದು ಎಡ್ಜಾರ್ ಸ್ನೋ ಅಭಿಪ್ರಾಯಪಟ್ಟಿದಾರೆ.

ಚನ್ನಪಟ್ಟಣದ ಪೌರಸಭೆಗೆ ಶ್ರೀ ಎಲ್. ಸಿ. ಶ್ರೀನಿವಾಸರಾಯರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದಾರೆ.

ಬನಾರಿಸ್ ಡಿ || ಸಲ್ಲಿ 1942 ರಲ್ಲಿ ಪೋಲೀಸರ ಗುಂಡು ಹೊಡೆತದಿಂದ 17 ಮಂದಿ ಸತ್ತಿರುವರು.

ಇಂಡೋಚೈನಾದಲ್ಲಿ ಫ್ರೆಂಚರಿಗೂ ಅನ್ನೆಸ್ಟರಿಗೆ ಕಳೆದ ಭಾನುವಾರ ಹೊಡೆದಾಟವಾಗಿ 30 ಮಂದಿ ಸತ್ತರು.

ಷಾಂಘಾಯಿನಲ್ಲಿ 2400 ಮಂದಿ ಜರ್ಮನರು ನಿರ್ಬಂಧದಲ್ಲಿಡಲ್ಪಟ್ಟಿದಾರೆ.

ಹಿಂದೂಸ್ಥಾನ ಸರಕಾರದವರು ಯುದ್ಧೋತ್ತರ ಕಾಲದಲ್ಲಿ ದಶಾಂಶ ರೂಪಕವಾದ ಹೊಸ ನಾಣ್ಯಗಳನ್ನು ತೆಗೆಯುತಕ್ಕವರಿದ್ದು ಅವುಗಳ ಉತ್ಕೃಷ್ಟ ಸಕ್ಕೆಯು ಮಾದರಿಯನ್ನು ಕಳಿಸುವ ಕಲಾವಿದನಿಗೆ ರೂ. 2000 ಇನಾಮಾಗಿ ಕೊಡುವದಾಗಿ ಪ್ರಕಟಿಸಿದ್ದಾರೆ.

ಬಾಪುವಿನ ಹುಟ್ಟುದಿನ

ಬಾಪುವಿನ ಬಾಳುವೆಯು ಹೊಸದೂ ಹೌದು, ಹಳೆಯದೂ ನಿಜ. ಅದು ಮಹಾಪೂರದಂತೆ ವೇಗವಾಗಿ ಹರಿಯುತ್ತಿರುವ "ಮಧುರಜೀವನ!" ಭಾರತದ ಗುಲಾಮಗಿರಿಯನ್ನು, ಅಸ್ಪರ್ಶತೆ, ಹಿಂಸಾಭಾವ ಮೊದಲಾದ ಹಿನಾಯ ನೈರ್ಮಾಲ್ಯವನ್ನು ತೊಳೆಯುವುದರಲ್ಲೇ ಅಂದಿದಿನವೂ ತುಂಬಿ ಹರಿದಿದೆ. ಗಾಂಧೀ ಅವರು ಈಗ ತನ್ನ ಎಪ್ಪತ್ತಾರನೆಯ ಹೊಸಬಲನ್ನು ದಾಟುತ್ತಿರುವರು. ಅವರ ಅನಂತವಾದ ಜೀವನದಲ್ಲಿ ಈ ವರ್ಷವು ಬಂದು ಬಿಂದು ಸಮಾನ ಆದರೆ ಅದು ಅಖಿಲ ವಿಶ್ವದ, ಇತಿಹಾಸದ ವಿಶ್ಯಮೂಲ್ಯವಾದ ಘಳಿಗೆಗಳು. ಬಾಪು ಅವರು ಈ ವರ್ಷದಲ್ಲಿ ತನ್ನ ನಾಡಿಗೆ ಅತ್ಯಮೋಘ ಸೇವೆಯನ್ನರ್ಪಿಸಿರುವರು. ತನ್ನ ಖಂಡ ಕಾಲದ ಸೆರೆವಾಸದಲ್ಲಿ. "ಬಾ", ಮಹದೇವ ಬಾಯಿಯಾ ಮೊದಲಾದ ಅವಮಾಲ್ಯವಾದ ಅವಮಾಲ್ಯ ರತ್ನಗಳನ್ನ ಕಳಕೊಂಡ ದುಃಖದೆಡೆಯಲ್ಲಿ ಬಿಂದು ಒಸಗಳಿದು ಹೊರಬಂದರು. ಅದರೆ ಏನು? ಅವರಿಗೆ ವಿಂತನುಮಿಲ್ಲ ಅವರು ಭಾರತದ ಉಸಿರು. ಅವರು ಸ್ತಬ್ಧರಾದರೆ, ಭಾರತವೆಲ್ಲಾ ಸ್ತಬ್ಧವಾಗುವುದು.

ಬಾಪೂ ತನ್ನ ಅಸೆಯ ದೃಷ್ಟಿಯನ್ನು ಪುನಃ ಸರಕಾರದೆಡೆಗೆ, 'ಸಂಘಟನೆ' ಅತ್ತ ಹರಿಸಿದರು. ಅವರ ಲೇಖನಿಯಿಂದ ಜಿನ್ನಾ-ಗಾಂಧಿ ಪತ್ರವ್ಯವಹಾರವು ಸಾಗಿತು. ಅದರೊಂದಿಗೇ ಜಿನ್ನಾ ಭೇಟಿ! ಅದೆಂತಹಾ ಎಂಬೊಮ್ಮೆ ಮಿಂಚಿತು ದೇಶವೆಲ್ಲಾ? ಅದೆಂತಹ ಅಸೆಯ ಕಿರಣವನ್ನು ಬೆಳಗಿಸಿದರು ಬಾಪು! ದೇಹಶ್ರಮ — ಅಭಿಮಾನ — ಸೋಲು-ಗಳ ಪರವೆ ಇಲ್ಲದೆ ಪೌಸಿಸಿದರು ಅವರು. ಅದರೆ ಸಾಧಿಸಲಿಲ್ಲ. ನಿರಾಸೆಯೆಂಬುದಿಲ್ಲ ಅವರಿಗೆ

"ನಾನು ದುಡಿಯಲಿರುವೆ. ಎಲ್ಲವೂ ಅವನ ಕೈವಾಡ" ಎಂಬುವು ಅವರ ಮಾತು. ಹಾಗೆ ವೈಸರಾಯ್ — ಗಾಂಧಿ ಮಾತುಕತೆಗಳನ್ನು ಮುಂದಿಟ್ಟರು. ಬಾಪೂ — ಗಾಂಧೀಜಿ ಪುನಃ ಕಾರ್ಯರಂಗದಲ್ಲಿ ಸೆಣಸಲು ಸೊಂಟಕಟ್ಟಿದರು. ಅದು ಫಲವಾಗಿ ಸಿಮ್ಲಾ ಪರಿಷತ್ತಿ ಘೋಷಣೆ ಹೊರಬಿತ್ತು. ನಾಡಿನ ಕೋಟ್ಯಾನುಕೋಟಿಯ ಎದೆಯಲ್ಲಿ ಪುನಃ ನೀರೀಕ್ಷೆಯ ತೆರೆ ಎದ್ದಿತು. ಬಾಪೂ ತಣಿಯಲಿಲ್ಲ. ತನಗಾಗಿ ಒಂದು ಕರೆಯನ್ನು ಮರೆತು, 'ನಾನು ಒರಲಾರೆ. ಆಜಾದ್, ನೆಹರೂ ಮೊದಲಾದ ಅಲ್ಲಿ ಬರಬೇಕು' ಎಂದು ಜೈಲೂ ವಾಸಕ್ಕೆ ನಿಂತರು. "ದೇಶ ಕಲ್ಯಾಣ ಸ್ವಾತಂತ್ರ್ಯ" ಅದು ಅವರ ಸೆಡೆಯದ ಉಸಿರು ತಳಹದಿ!!

(ಮುಂದುವರಿಯುವುದು)

೩ ಪತ್ರಿಕೆಗಳ ಮೇಲೆ ಮುಟ್ಟುಗೋಲು

ನ್ಯೂಯಾರ್ಕ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾದ ಅಮೇರಿಕಾ ಪತ್ರಿಕಾ ಪ್ರತಿನಿಧಿ ಮತ್ತು ಹೀರೋಹಿಟೋ ಚೇಟೆಯ ವಿವರಗಳನ್ನು ಎತ್ತಿ, ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದವೆಂದು ಜಪಾನಿನ ೩ ಪತ್ರಿಕೆಗಳ ಪ್ರಕಟಣೆಯ ಮೇಲೆ ಮುಟ್ಟುಗೋಲು ಹಾಕಲಾಗಿದೆ.

ಮುಂಬಯಿ ಗಲಾಟೆ

ಮುಂಬಯಿನಲ್ಲಿ ವತ್ತೆ ಗಲಭೆ ಮುತ್ತು ತಿವಿತದ ಘಟನೆಗಳು ನಡೆದಿದ್ದೆ. ಮುಂಬಯಿನಲ್ಲಿ ಛೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅಧಿ ಪತ್ರಿಕಗಳಿಗೆ ಎಚ್ಚರಿಕೆ ಆಜ್ಞೆಯನ್ನು ಜಾರಿಮಾಡಿ, ಕೋಮುವಾರು ಉದ್ರೇಕವನ್ನುಂಟುಮಾಡು ಗಲಭೆ ವಿವರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಕೂಡದೆಂದಿರುವರು.

ಅನಾವರಣೋತ್ಸವ

ಬೆಂಗಳೂರು ವಿಶ್ವವಿದ್ಯಾನಿಲಯದ ಯೂನಿಯನ್ ಆಶ್ರಯದಲ್ಲಿ ಮದರಾಸಿನ ಸಿ. ರಾಜಗೋಪಾಲಚಾರ್ಯರು ಶ್ರೀಮತಿ ಕಸ್ತೂರಬಾ ಗಾಂಧಿ ಮತ್ತು ರಾಷ್ಟ್ರಪತಿ ಆಜಾದ್‌ರವರ ಭಾವಚಿತ್ರ ಅನಾವರಣ ಮಾಡುವರು.

ಭಾರತಕ್ಕೆ ಸ್ಥಾನವಿದೆ

ದೂರಪ್ರಾಚ್ಯ ಕಮಿಷನ್ನಿನಲ್ಲಿ ಭಾರತಕ್ಕೊಂದು ಸ್ಥಾನವಿರಬೇಕೆಂಬ ಬ್ರಿಟನ್ನಿನ ಸೂಚನೆಯನ್ನು ಅಮೇರಿಕಾ ಅನುಮೋದಿಸಿದೆ.

ರಷ್ಯಾಸೇನೆ ವಾಪಸು

ರಷ್ಯಾ ಸೇನೆಗಳು ಮಂಚೂರಿಯಾ ಬಿಡಲಾರಂಭಿಸಿವೆ.

ಧರ್ಮಯುದ್ಧಕ್ಕೆ ಸಿದ್ಧ

ಪ್ಯಾಲಿಸ್ಟೈನನ್ನು ವಿಭಾಗಿಸಿದರೆ ಅರಬ್ಬರು ಧರ್ಮಯುದ್ಧ ನಡೆಸುವುದಾಗಿ ತಿಳಿಸಿರುವರು.

ಜಪಾನ್ ಮಂತ್ರಿಯ ದಸ್ತಗಿರಿ

ಪರ್ಲ್ ಹಾರ್ಬರ್ ಧುರಂತದ ಸಮಯದಲ್ಲಿ ಜಪಾನ್ ವಿದೇಶಾಂಗ ಮಂತ್ರಿಯಾಗಿದ್ದ ಅ || ತೋಗೋರವರು ಯುದ್ಧ ತಕ್ಷೀರುದ್ದಾಂತಾಗಿ ದಸ್ತಗಿರಿ ಮಾಡಲ್ಪಟ್ಟರು.

ಯುಪೂರ್ಯರನ್ನು ಸೇರಿಸಿ

ಯುಹೂರ್ಯರನ್ನು ಜರ್ಮನಿಗೆ ಸೇರಿಸಿರೆಂದು ಬ್ರಿಟನ್ನಿಗೆ ಪ್ರೆಸಿಡೆಂಟ್ ಟ್ರೂಮ್ಯನ್ ವಿನಂತಿಸಿಕೊಂಡಿದ್ದಾರೆ.

ರಾಜಕೀಯ ಖೈದಿಗಳೆಂದರೆ ನರಕಕ್ಕೆ ಹೋಗುವ ಪಾಪಿಗಳೇ ?

ಅಲಹಾಬಾದ್, ಸೆ 29

ಕಾಶೀನಗರದಲ್ಲಿ ರಾಜಕೀಯ ಖೈದಿಗಳ ಮೇಲೆ ಅತ್ಯಾಚಾರ ನಡೆಸಿದ್ದು ಈಗ ತಿಳಿದು ಬಂದಿದೆ.

ರಾಜಕೀಯ ಖೈದಿಗಳ ಕೈಗಳಿಗೆ ಕೋಳಗಳನ್ನು ತೊಡಿಸಿ, ಕಾಲುಗಳನ್ನು ಒಂದಿಸಿ ಒಂದು ಮೈಲಿ ದೂರದಲ್ಲಿದ್ದ ನ್ಯಾಯಾಸ್ಥಾನಕ್ಕೆ ಎಳೆದುಕೊಂಡು ಹೋದರು ಒಂದು ಮೈಲಿಯವರೆಗೆ ನಡೆಯುವುದು ತಮಗಸಾಧ್ಯವೆಂದು ಪೊಲಿಸಧಿಕಾರಿಗಳಿಗೆ ರಾಜಕೀಯ ಖೈದಿಗಳು ಉತ್ತರವಿತ್ತಿದ್ದರು. ನ್ಯಾಯಾಸ್ಥಾನವನ್ನು ತಲುಪುವ ವೇಳೆಗೆ ಆ ರಾಜಕೀಯ ಖೈದಿಗಳ ಚರ್ಮವು ಸುಲಿಯಲ್ಪಟ್ಟ ನೆತ್ತರು ಹರಿಯುತ್ತಿದ್ದಿತು. ಈ ಅನಾಗರೀಕ ಕೃತ್ಯದ ವಾರ್ತೆಯು ಪಂ || ನೆಹರೂರವರ ಗಮನವನ್ನು ಎಳೆಯುವಂತೆ ಮಾಡಿತು.

ಪಂ || ನೆಹರು ಹೇಳಿಕೆಯೊಂದನ್ನು ಹೊರಡಿಸುತ್ತಾ " ಇದು ನಂಬಲನರ್ಹವಾದ ಕೆಟ್ಟ ಸುದ್ದಿ. ಆದರೆ, ಸತ್ಯಾಂಶಕ್ಕೂ ಸ್ರಸಿದ್ಧ ಕಾಶೀನಗರದಲ್ಲಿ ಈ ದುಷ್ಕೃತ್ಯ ನಡೆದಿದೆ. ವಕೀಲ ಸಂಘ ಪೋಲಿಸರ ಅಕೃತ್ಯ ವರ್ತನೆಯನ್ನು ತೀವ್ರವಾಗಿ ಖಂಡಿಸಿದೆ. ಬೆಲ್ಸನ್ ಶಿಬಿರದ ಸೆನೆವು ಈ ದುಷ್ಕೃತ್ಯ ತರುವುದು. ವ್ಯಸನಪೂರಿತವಾದ ಈ ಕೃತ್ಯವನ್ನು ಅರಿತಿದ್ದಾಗ್ಯೂ, ಅಲ್ಲಿಯ ಪ್ರಜೆಗಳು ತಂಪಾಗಿದ್ದುದು ಆಶ್ಚರ್ಯ ! ಇದು ನಮ್ಮೆಲ್ಲರ ರಕ್ತವನ್ನು ಕುದಿಸಿದೆ ; ಹುಚ್ಚರನಾಗಿ ಮಾಡಿದೆ ; ಪ್ರತಿಕಾರ ಕೈಗೊಳ್ಳಲು ಬೋಧಿಸುತ್ತದೆ. ಟ್ವೀಸ್‌ಡೇಲ್ ಎಂಬ ಪೋಲಿಸ್ ಇಂಸ್ಪೆಕ್ಟರ್ ಈ ಕೃತ್ಯಕ್ಕೆ ವಾಲಸೆಂದು ವಂದಿಯಾಗಿದೆ. ಇಂಥಹ ಧುರಂತಪ್ರೇರಕ ವ್ಯಕ್ತಿಯ ವಿಚಾರಣೆ ಬಹಿರಂಗವಾಗಿ ಪರ್ಯಟ್ಟಣ, ಸಶ್ರಮ ಶಿಕ್ಷೆಯನ್ನು ವಿಧಿಸಬೇಕು " ಎಂದಿರುವರು.

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

☞ EVENING SHOWS

From 26-9-45

AT Opera—

Ali Baba &

Forty Thieves

(in Technicolor)

Featuring—

MARIA MONTEZ

JON HALL

TURHAN BEY

Daily 3 Shows

At Ranjit

Humayun

4 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್

ವೀಣಾ, ನರ್ಗಿಸ್, ಸ್ಥಾನವಾಸ

ಪಾತ್ರವಹಿಸಿರುವರು

For Good Printing

L. N. Press

Sriramp st MYSORE



ಐ. ಜೆ. ಹಾಲ್

ಶಿವಪ್ಪ ಬೀದಿ — ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಡ್ಡಿ ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಪ್ರಸಿದ್ಧ ಅಡಿಕೆಪುಡಿ ಒಂದು ವೈಶಿಷ್ಟ್ಯ

ನಮ್ಮ ಶ್ರೀ ಓಂ ಗುಡಿತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣಿ ವ್ಯಾಪಾರಿಗಳು)

ಬಳೆ. ಗೋವಿಂದಪ್ಪ ನಾಯಕ ರಸ್ತೆ, ಜೆ. ಟಿ. ಮದರಾಸು.

ಡ್ಯಾಶಿಂಗ್ ಪೆಟ್ರೋಲ್ ಸೈಕಿಲು